# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 10/ಸಭೆ/ಪಿಆರ್/05/2020-21 ದಿನಾಂಕ: 05/12/2020.

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ.10 ದೊಡ್ಡಬೊಮ್ಮಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 05/12/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಾರ್ಡ್ ಸಮಿತಿ ಸದಸ್ಯರು**

1. ಶ್ರೀ ಅಮರ್ ಸಿಂಗ್, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
2. ಶ್ರೀ ವಿಜಯ್ ಬೆನಗಿ, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
3. ಶ್ರೀ ಸುಜಿತ್ ಸೋನಿಲ್, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
4. ಶ್ರೀ ಪ್ರಕಾಶ್ ಕೆ, ಸದಸ್ಯರು
5. ಶ್ರೀ ದಯಾಳ್, ಸದಸ್ಯರು
6. ಶ್ರೀ ಶ್ರೀನಿವಾಸ್, ಸದಸ್ಯರು
7. ಶ್ರೀ ಆರ್.ಎಂ. ಶ್ರೀನಿವಾಸ್, ಸದಸ್ಯರು
8. ಶ್ರೀ ಗೋಪಾಲ್‌ಕೃಷ್ಣ, ಸದಸ್ಯರು
9. ಶ್ರೀ ಮಲ್ಯಾದಿ, ಸದಸ್ಯರು

**ಹಾಜರಿದ್ದ ಅಧಿಕಾರಿ/ಸದಸ್ಯರು**

1. ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ, ಕೊಡಿಗೇಹಳ್ಳಿ ಉಪವಿಭಾಗ
2. ಶ್ರೀ ಶ್ವೇತಾ ಎನ್.ಆರ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಡಾ ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ಯಲಹಂಕ ವಲಯ, ಬೆಂಗಳೂರು
5. ಶ್ರೀ ಸತ್ಯನಾರಾಯಣ, ಕಂದಾಯ ವಸೂಲಿಗಾರರು
6. ಶ್ರೀ ಪ್ರಭಾಕರ್, ಹಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ ಮಹೇಶ್ ಕುಮಾರ್ ಎಲ್, ಕಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ಸುರೇಶ್ ಈ.ಎಸ್, ಬಿಬಿಎಂಪಿ ಮಾರ್ಷಲ್
9. ಶ್ರೀ ಪ್ರಕಾಶ್ ಕೆ, ಸದಸ್ಯರು
10. ಶ್ರೀ ದಯಾಳ್, ಸದಸ್ಯರು
11. ಶ್ರೀ ಶ್ರೀನಿವಾಸ್, ಸದಸ್ಯರು
12. ಶ್ರೀ ಮಲ್ಯಾದಿ, ಸದಸ್ಯರು
13. ಶ್ರೀ ಆರ್ ಎಂ ಶ್ರೀನಿವಾಸ್, ಸದಸ್ಯರು
14. ಶ್ರೀ ಗೋಪಾಲ್‌ಕೃಷ್ಣ, ಸದಸ್ಯರು

ಪು.ತಿ.ನೋ..

<u>ಗೈರುಹಾಜರಾಗಿರುವ ಅಧಿಕಾರಿಗಳು</u>

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ವಿದ್ಯಾರಣ್ಯಪುರ, ಬೆಂಗಳೂರು
2. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲಹಂಕ ವಲಯ, ಬೆಂಗಳೂರು
3. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಲಾ ಅಂಡ್ ಆರ್ಡರ್)
4. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಸಂಚಾರ)

**ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು ಹಾಗೂ ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ Whatsapp ನಲ್ಲಿ ತಿಳಿಸಿರುವ ಆದೇಶದಂತೆ ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರಿ ಜಾಗವನ್ನು ಗುರುತು ಮಾಡಿಕೊಡಲು ಹಾಗೂ ಅವಶ್ಯಕವಿರುವ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಮಾಡಲು ಯಾವುದಾದರೂ ರಸ್ತೆಗಳಿದ್ದರೆ ತಿಳಿಸಲು ಸಭೆಯಲ್ಲಿ ನೆರೆದಿದ್ದ ಸದಸ್ಯರನ್ನು ಹಾಗೂ ಸಾರ್ವಜನಿಕರನ್ನು ಕೋರಿರುತ್ತಾರೆ.

**ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ:-** ಕೋವಿಡ್ 19 ಗೆ ಸಂಬಂಧಿಸಿದಂತೆ ವಾರ್ಡ್ ನಂ. 10ರ ವ್ಯಾಪಿಯಲ್ಲಿ ಪ್ರತಿ ದಿನ ನಾಗರೀಕರನ್ನು ಪರೀಕ್ಷೆ ಮಾಡಲಾಗಿ ಪ್ರಸ್ತುತ ಗಣನೀಯವಾಗಿ ಕೋವಿಡ್ ಪಾಸಿಟಿವ್ ಕೇಸ್‌ಗಳು ಕಡಿಮೆಯಾಗಿರುವುದಾಗಿ ತಿಳಿಸಿರುತ್ತಾರೆ. ಪ್ರಸ್ತುತ ಚಳಿಗಾಲವಿದ್ದು ಕೋವಿಡ್ ತ್ವರಿತಗತಿಯಲ್ಲಿ ಹರಡುವ ಸಂಭವವಿರುವುದರಿಂದ ಹೆಚ್ಚಾಗಿ ಮಕ್ಕಳು ಹಾಗೂ ವಯೋವೃದ್ಧರು ಹೆಚ್ಚಿನ ಕಾಳಜಿ ವಹಿಸಬೇಕೆಂದು ಕೋರಿರುತ್ತಾರೆ. **ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ ಯವರ ಕಾರ್ಯವೈಖರಿಯನ್ನು ನೆರೆದಿದ್ದ ಸದಸ್ಯರುಗಳು ಹಾಗೂ ಸಾರ್ವಜನಿಕರು ತುಂಬಾ ಪ್ರಶಂಸಿರುತ್ತಾರೆ ಹಾಗೂ ಸದರಿಯವರು ಸಾರ್ವಜನಿಕರ ಆರೋಗ್ಯದ ಕುಂದುಕೊರತೆಗಳಿಗೆ ತ್ವರಿತಗತಿಯಲ್ಲಿ ಸ್ಪಂದಿಸುತ್ತಾರೆ ಎಂದು ಹರ್ಷ ವ್ಯಕ್ತಪಡಿಸಿರುತ್ತಾರೆ.**

**ಗೋಪಾಲ್‌ಕೃಷ್ಣ, ಎಂ. ಶ್ರೀನಿವಾಸ್, ಪಿ. ಪಿಳ್ಳಪ್ಪ, ಮಲ್ಯಾದ್ರಿ,** ಸದಸ್ಯರು:- ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಬರುವ ರಾಮಚಂದ್ರಪುರ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ ಆದ್ದರಿಂದ ಸದರಿ ದೀಪಗಳನ್ನು ದುರಸ್ಥಿ ಮಾಡಲು ಕೋರಿರುತ್ತಾರೆ.

**ಗೋಪಾಲ್‌ಕೃಷ್ಣ, ಎಂ. ಶ್ರೀನಿವಾಸ್, ಪಿ. ಪಿಳ್ಳಪ್ಪ, ಮಲ್ಯಾದ್ರಿ,** ಸದಸ್ಯರು:- ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ಪ್ರಸ್ತುತ ವಾರಕ್ಕೆ ಎರಡು ಬಾರಿ ಮಾತ್ರ ಕಾವೇರಿ ನೀರು ಬರುತ್ತಿದ್ದು, ಅದೂ ಕೂಡ ತಡರಾತ್ರಿ ಬರುತ್ತಿರುತ್ತದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ ಬೋರ್‌ವೆಲ್‌ಗಳ ಮೂಲಕ ನೀರು ಸರಬರಾಜನ್ನು ಕನಿಷ್ಠ ಪಕ್ಷ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳಲು ಹಿಂದಿನ ಸಭೆಯಲ್ಲಿ ಕೋರಲಾಗಿದ್ದು, ಅದರಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಸಾರ್ವಜನಿಕರ ಕೋರಿಕೆಗೆ ಮನ್ನಣೆ ನೀಡಿ ನೀರು ಸರಬರಾಜು ಮಾಡಲು ಕ್ರಮಕೈಗೊಂಡಿರುವುದಾಗಿ ಸದಸ್ಯರುಗಳು ಹಾಗೂ ಸಾರ್ವಜನಿಕರು ತಿಳಿಸಿರುತ್ತಾರೆ ಹಾಗೂ ಹರ್ಷ ವ್ಯಕ್ತಪಡಿಸಿರುತ್ತಾರೆ.

**ಶ್ರೀನಿವಾಸ್, ಮಲ್ಯಾದ್ರಿ, ಗೋಪಾಲ್‌ಕೃಷ್ಣ, ಸದಸ್ಯರು:-** ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿ ರಾಮಚಂದ್ರಪುರ ರಸ್ತೆಯಲ್ಲಿ ಬರುವ ಬಸ್ ನಿಲ್ದಾಣದ ಬಳಿ ಬ್ಲಾಕ್ ಸ್ಪಾಟ್ ಇದ್ದು, ಸದರಿ ಬ್ಲಾಕ್ ಸ್ಪಾಟ್‌ಅನ್ನು ತೆರವುಗೊಳಿಸಲು ಕೋರಿರುತ್ತಾರೆ. ಅದರಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಮು.ತಿ.ನೋ..

ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

5/12/2020

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 10, ದೊಡ್ಡಬೊಮ್ಮಸಂದ್ರ

ನೋಡೆಲ್ ಅಧಿಕಾರಿ ವಾರ್ಡ್-10 ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಪ್ರತಿಯನ್ನು:

1. ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ/ಯೋಜನಾ ವಿಭಾಗ, ಬಿ.ಬಿ.ಎಂ.ಪಿ ರವರಿಗೆ ಸಲ್ಲಿಸಿದೆ
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿದ್ಯಾರಣ್ಯಪುರ ವಿಭಾಗ ರವರಿಗೆ ಸಲ್ಲಿಸುತ್ತಾ ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂ ಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ, ಬೆಂಗಳೂರು.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ವಿದ್ಯಾರಣ್ಯಪುರ, ಬೆಂಗಳೂರು ರವರಿಗೆ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
10. ಕಾಂಟ್ಯಾಕ್ಟ್ ಟ್ರೇಸಿಂಗ್ ನೋಡೆಲ್ ಅಧಿಕಾರಿ, ಬ್ಯಾಟರಾಯನಪುರ ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿದೆ.
11. ಹೋಮ್ ಕ್ವಾರಂಟೀನ್ ಸ್ಕ್ವಾಡ್ ನೋಡೆಲ್ ಅಧಿಕಾರಿ, ಬ್ಯಾಟರಾಯನಪುರ ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿದೆ.
12. ಕಲ್ಯಾಣಾಧಿಕಾರಿ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
13. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
14. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಲಾ ಅಂಡ್ ಆರ್ಡರ್) ರವರಿಗೆ ಸಲ್ಲಿಸಿ ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಸಂಚಾರ) ರವರಿಗೆ ಸಲ್ಲಿಸಿ ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
16. ಕಛೇರಿ ಕಡತಕ್ಕೆ.